ಕಾರವಾರದಿಂದ ದಾವಣಗೆರೆಗೆ ಕೂಡು ರಸ್ತೆ

೯೯೯. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾರವಾರದಿಂದ ದಾವಣಗೆರೆಗೆ ಕೂಡು ರಸ್ತೆ ಮಾಡುವುದಾಗಿ ಹಿಂದಿನ ಸಭೆಯಲ್ಲಿ ತಿಳಿಸಿದ್ದರ ಬಗ್ಗೆ ಯಾವ ಕ್ರಮ ಸರಕಾರ ಕೈಕೊಂಡಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಹಾಗೂ ನೀರಾವರಿ ಸಚಿವರು).

ಅ) ಕಾರವಾರದಿಂದ–ಕತ್ತಾಳ – ಕೊಳಗೇರಿ – ಶಿರಸಿ – ಬನವಾಸಿ – ಚಿಕ್ಕೇರೂರು – ಅನವಟ್ಟಿ, ಹಿರೇಕೆರೂರು ಊರುಗಳಲ್ಲಿ ಹಾದು ಹೋಗುವ ಕಾರವಾರ – ದಾವಣಗೆರೆ ರಸ್ತೆಯ ಒಟ್ಟು ಉದ್ದ ೨೭೧ ಕಿ.ಮೀ. ಇದರಲ್ಲಿ ೨೬.೬೦ ಕಿ.ಮೀ. ಉದ್ದ ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಮೇಲ್ಕಂಡ ರಸ್ತೆಯಲ್ಲಿ ಹರಿಹರ ತಾಲ್ಲೂಕಿನ ನಂದಗುಡಿ ಹತ್ತಿರ ತುಂಗಭದ್ರಾ ನದಿಗೆ ಒಂದು ಸೇತುವೆಯನ್ನು ನಿರ್ಮಾಣ ಮಾಡಬೇಕಾಗಿದ್ದು, ಈ ಸೇತುವೆಯ ಕೆಲಸವನ್ನು ೮೬–೮೭ರ ಆಯವ್ಯಯದಲ್ಲಿ ಸೇರಿಸಲಾಗಿದೆ.

ಹರಿಹರ ದಾವಣಗೆರೆ ರೈಲ್ವೆ ಗೇಟಿನ ಬಳಿ ರಸ್ತೆ ನಿರ್ಮಾಣ ಕಾರ್ಯ

೧೨೯೧. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಿಹರ ದಾವಣಗೆರೆ ಮಧ್ಯದಲ್ಲಿರುವ ಎರಡು ರೈಲ್ವೆ ಗೇಟುಗಳ ದಕ್ಷಿಣ ದಿಕ್ಕಿನಲ್ಲಿ ಳನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿಯನ್ನು ಇಲಾಖಾ ವತಿಯಿಂದಾಗಲೀ ರಾಜ್ಯ ಸರ್ಕಾರದ ವತಿಯಿಂದಾಗಲೀ ರಸ್ತೆ ನಿರ್ಮಾಣ ಕಾರ್ಯ ಮಾಡಲು ಅನೇಕ ವರ್ಷಗಳಿಂದ ಪ್ರಯತ್ನ ಪಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈಗಾಗಲೇ ಸದರಿ ರಸ್ತೆಯ ಬಗ್ಗೆ ಲೋಕೋಪಯೋಗಿ ಇಲಾಖೆಯವರು ಅಂದಾಜು ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸದರಿ ರಸ್ತೆಯ ನಿರ್ಮಾಣದ ಬಗ್ಗೆ ಸರ್ಕಾರದವರು ೧೯೮೬–೮೭ನೇ ಸಾಲಿನ ಆಯವ್ಯಯದಲ್ಲಿಯೇ ಆಗಲಿ ಅಥವಾ ೧೯೮೭–೮೮ ನೇ ಸಾಲಿನ ಆಯವ್ಯಯದಲ್ಲಿಯೇ ಆಗಲಿ ಸೇರಿಸಲು ಪ್ರಯತ್ನ ಮಾಡುವರೆ ?

ಈ) ಈ ಎರಡು ಗೇಟುಗಳನ್ನು ಮುಚ್ಚಿದಾಗ ನೂರಾರು ವಾಹನಗಳು ರಸ್ತೆಯ ಮೇಲೆ ವೃಥಾ ನಿಲ್ಲುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಾದರೆ ಕೇಂದ್ರ ಸರ್ಕಾರದೊಂದಿಗಾದರೂ ವ್ಯವಹರಿಸಿ ಈ ಕಾರ್ಯವನ್ನು ತ್ವರಿತ ಗತಿಯಿಂದ ಮಾಡಿ ಮುಗಿಸಲು ಕ್ರಮ ಕೈಕೊಳ್ಳಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಹಾಗು ನೀರಾವರಿ ಮಂತ್ರಿಗಳು).—

ಅ)—ಅ) ಮತ್ತು ಇ).

ದಾವಣಗೆರೆ–ಹರಿಹರ ಹೊರಗೆ ರಾಷ್ಟ್ರೀಯ ಹೆದ್ದಾರಿ–೪ಕ್ಕೆ ಬೈಪಾಸ್ ರಸ್ತೆಯನ್ನು ಈಗಿರುವ ರಸ್ತೆಯ ದಕ್ಷಿಣ ಭಾಗದಲ್ಲಿ ನಿರ್ಮಿಸಲಾಗುತ್ತಿದೆ. ಈ ಕೆಲಸಕ್ಕೆ ಇದುವರೆಗೆ ೧೬೧ ಲಕ್ಷ ರೂಪಾಯಿ ಗಳಷ್ಟು ಖರ್ಚಾಗಿದ್ದು, ಡಿಸೆಂಬರ್ ೧೯೮೬ರ ವೇಳೆಗೆ ಮುಗಿಯುವ ನಿರೀಕ್ಷೆ ಇದೆ.

ಈ) ಬೈಪಾಸ್ ರಸ್ತೆಯ ನಿರ್ಮಾಣವಾದ ಮೇಲೆ ಹರಿಹರದಿಂದ ಆಚೆ ಕಡೆಗೆ ಹೋಗುವ ನೇರ (ತ್ರೂ) ವಾಹನಗಳು ಬೈಪಾಸ್‌ನಲ್ಲಿ ಹೋಗುವುದರಿಂದ ಈಗಿರುವ ರೈಲ್ವೆ ಗೇಟುಗಳ ಬಳಿ ವಾಹನದ ಒತ್ತಡ ಸಾಕಷ್ಟು ಕಡಿಮೆಯಾಗುತ್ತದೆ.

ಉ) ಮೇಲೆ ತಿಳಿಸಿರುವಂತೆ ಈ ಬೈಪಾಸ್ ಕೆಲಸವು ಡಿಸೆಂಬರ್ ವೇಳೆಗೆ ಮುಗಿಯುವ ನಿರೀಕ್ಷೆ ಇದೆ.